ಸಕ್ಕರೆ ಕಂಪೆನಿಯನ್ನು ಏರ್ಪಾಡುಮಾಡುವುದನ್ನು ಪರಿಶೀಲನೆಮಾಡುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಮಾಡಿರ ತಕ್ಕದು ಊಹೆ. ಆದ್ದರಿಂದ ತಮ್ಮ ಊಹೆಯ ಮೇಲೆ ಮಾಡಿರತಕ್ಕ inference ಸರಿಯಲ್ಲ. ಸರ್ಕಾರದ ವರು ಯಾವ ಕಾರ್ಖಾನೆ ಸಕ್ಕರೆ ಕಂಪೆನಿಯ ಕಾನೂನು ಪ್ರಕಾರ ಅರ್ಜಿಯನ್ನು ಪಡೆದಿರುತ್ತದೆಯೋ ಅವರಿಗೆ ಮಾತ್ರ ಲೈಸೆನ್ಸ್‌ಕೊಡುತ್ತಾರೆ. ತಾವು ಹೇಳಿದ ಸಮಗ್ರ ಸಹಕಾರ ಸಂಘವು ಆದರ ಕ್ಷೇತ್ರದಲ್ಲಿ ಇದನ್ನು ನಡೆಸುವುದಕ್ಕೆ ಅವಕಾಶವಿರಲ್ಲಿ ಆ ಕಾರಣ ಅದಕ್ಕೆ ಅವಕಾಶ ಸಿಕ್ಕಲಿಲ್ಲ. ಅವರ ಮೇಲೆ ಅವರೇ ವಾಪಸು ಕೊಟ್ಟರೇ ಏನಾ ಸರ್ಕಾರದವರು ಪ್ರವೇಶಮಾಡಿದ್ದಾರೆಂದು ಊಹೆ ಮಾಡಿದ್ದು ತಪ್ಪು.

ಶ್ರೀ ಎಸ್ ಗೋಪಾಲಗೌಡ.—ಮಾನ್ಯ ಮಂತ್ರಿಗಳು ಹೇಳಿದರು, the original society to which license had been given had no proper jurisdiction or place, ಆದಕ್ಕೆ ಸಾಕಷ್ಟು ವ್ಯಾಪ್ತಿಯಿರಲಿಲ್ಲ. ಈ ಕಾರಣದಿಂದ ಬೇರೆ ಕಂಪೆನಿಯನ್ನು ಮಾಡಬೇಕಾದ ಅಗತ್ಯ ಬಿತ್ತು ಎಂದು ಲೈಸೆನ್ಸ್ ಕೊಡುವ ಸಂದರ್ಭದಲ್ಲಿ ಯಾರಿಗೆ ನಡೆಸುವ ಅರ್ಹತೆಯಿದೆಯೋ ಅದನ್ನು ನೋಡಿಕೊಡುತ್ತಾರಲ್ಲವೇ? ಕೇಂದ್ರ ಸರ್ಕಾರದವರು ಇದನ್ನು ಪರಿಶೀಲನೆಮಾಡಿರಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿಯೇ ಅದನ್ನು ಕೊಟ್ಟಿರತಕ್ಕದ್ದು. ಈ ಸಹಕಾರ ಸಂಘ ಸಕ್ಕರೆ ಕಂಪೆನಿಯನ್ನು ಸ್ಥಾಪಿಸಬೇಕೆಂಬ ಉದ್ದೇಶ ಬಂದಾಗ ಅವರು ಒಂದು Resolution ಮಾಡಿದರು. ಸ್ಥಾಪನೆಮಾಡುವುದಕ್ಕೆ ಕಮಿಷ್ಟ್ ಕೊಟ್ಟರೆ ತಾವು ಮಾಡಬಹುದು. ಅದಕ್ಕಾಗಿ ಬೇರೊಂದು ಸಹಕಾರ ಸಂಘವನ್ನು ಏರ್ಪಾಡುಮಾಡಿ ಮಾಡತಕ್ಕದು ಎಂದು general bodyಯವರು ತೀರ್ಮಾನಮಾಡಿಯೇ ಲೈಸೆನ್ಸ್ ಪಡೆದಿರತಕ್ಕದು.

1 P.M.

Mining Offences.

Q.—571. Sri R. ANANTARAMAN (Chamarajpet).—

Will the Government be pleased to state :—

(*a*) whether any mine-owners have committed offences in respect of Mining ;

(*b*) if so, the names of such mine-owners ;

(*c*) whether they have been prosecuted for such offences ;

(*d*) what steps they have taken to prevent the offences ?

A.—Sri H. M. CHANNABASAPPA (Minister for Industries).—

(*a*) and (*b*) Complaints of irregular mining activities in respect of seven holders of mining concessions have come to notice. Investigations in respect of one of them, *viz.*, Shri Natverlal Jamnadas of Bellary are complete and a prosecution is about to be launched. In regard to the rest, the investigations are not complete and hence the names cannot be furnished.

(*c*) *Vide* reply above.

(*d*) Inspections and periodic checks are being intensified.

ಶ್ರೀ ಆರ್. ಅನಂತರಾಮ್.—ತಾವು ಈ ತನಿಖೆಯನ್ನು ಎಷ್ಟು ದಿವಸಗಳಿಂದ ನಡೆಸುತ್ತಿದ್ದೀರಿ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಸುಮಾರು 3—4 ತಿಂಗಳಿಂದ.

ಶ್ರೀ ಆರ್. ಅನಂತರಾಮ್.—ಹೀಗೆ ತನಿಖೆ ನಡೆಸುತಿರುವ ಕಾಲದಲ್ಲೂ ಅವರಿಗೆ ಗಣಿಮಾಲೀಕರಾಗಿ ಓರ್ಸನ್ನು ತೆಗೆಯುವುದಕ್ಕೆ ಅನುಮತಿ ಕೊಟ್ಟಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತನಿಖೆಗೆ ಪ್ರಾರಂಭವಾದಮೇಲೆ ಯಾರಿಗೂ ಆರೀತಿ ಅವಕಾಶ ಕೊಟ್ಟಿಲ್ಲ.

ಶ್ರೀ ಆರ್. ಅನಂತರಾಮ್.—ಈಗ ತನಿಖೆಗೆ ಒಳಗಾಗಿರತಕ್ಕ ಇಷ್ಟು ಜನರಿಗೆ ಮಾತ್ರ ಲೈಸೆನ್ಸ್‌ಗಳನ್ನು ನಿಲ್ಲಿಸಿದ್ದೀರೋ ಅಥವಾ ಇನ್ನೂ ಬೇರೆ ಯಾರಿಗಾದರೂ ಹೀಗೆ ಲೈಸೆನ್ಸನ್ನು ನಿಲ್ಲಿಸಿದ್ದೀರೋ ?

ಶ್ರೀ ಎಚ್.ಎಂ ಚನ್ನಬಸಪ್ಪ.—ಇಲ್ಲಿಯವರೆಗೂ ನಮ್ಮ ಗಮನಕ್ಕೆ ಯಾರ್ಯಾರು ಬಂದಿದ್ದಾರೋ ಅಂಥವರುಗಳಿಗೆ ಮಾತ್ರ ನಿಲ್ಲಿಸಿದ್ದೇವೆ. ಹಾಗೊಂದುವೇಳೆ ಇನ್ನೂ ಯಾರಾದರೂ ಹಾಗೆ ಅಕ್ರಮವಾಗಿ ನಡೆವಳಿಕೆಗಳನ್ನು ನಡೆಸಿದ್ದರೆ ಅವರ ವಿಷಯದಲ್ಲೂ, ಆ ವಿಚಾರ ನಮ್ಮ ಗಮನಕ್ಕೆ ಬಂದರೆ, ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಟಿ. ಸಿ. ಬಸಪ್ಪ.—ತಾವು ಒಟ್ಟು ಎಷ್ಟು ಜನರಿಗೆ ಈ ಗಣಿಗಳ ಲೀಜ್ ಕೊಟ್ಟಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಳ್ಳಾರಿಯನ್ನು ಬಿಟ್ಟು ನಮ್ಮ ಮೈಸೂರಿನಲ್ಲಿ 116 ಜನರಿಗೆ ಈ ಲೀಜನ್ನು ಕೊಟ್ಟಿದ್ದೇವೆ.

ಶ್ರೀ ಟಿ. ಸಿ. ಬಸಪ್ಪ.—ಎಷ್ಟು ಜನರು ಈ ಲೀಜನ್ನು ಎಗ್ಸಿಕ್ಯೂಟ್ ಮಾಡಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—39 ಜನರನ್ನು ಬಿಟ್ಟು ಉಳಿದವರೆಲ್ಲಾ ಎಗ್ಸಿಕ್ಯೂಟ್ ಮಾಡಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಹಾಗೆ ಕಂಡೀಷ್ಟ್‌ಗಳಿಗೆ ಅನುಸರಿಸಿ ಎಗ್ಸಿಕ್ಯೂಟ್ ಮಾಡದಿದ್ದವರ ಮೇಲೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲಾಖಾ ಮೊಖ್ತೇಸರರು ಹಾಗೆ ಎಗ್ಸಿಕ್ಯೂಟ್ ಮಾಡದಿರುವುದು ನಿಬಂಧನೆಗಳಿಗೆ ಬಹಳ ವಿರೋಧವಾಗುತ್ತದೆಂದು ಅವರಿಗೆ ತಿಳಿಸಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಹಾಗೆ ನಿಬಂಧನೆಗಳಿಗೆ ಅನುಸಾರವಾಗಿ ಎಗ್ಸಿಕ್ಯೂಟ್ ಮಾಡಲು ಆಗದೆ ಇರತಕ್ಕವರಿಗೆ ಹೀಗೆ ಅವಕಾಶ ಕೊಟ್ಟಿರುವುದು ತಪ್ಪಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ಆದರೆ ಮೊದಲೇ ಲೀಜಾಗಿ ಬಿಟ್ಟಿದ್ದೆವು. ಆನಂತರ ಅವರು ಕಂಡೀಷ್ಟ್ ಪ್ರಕಾರ ವರ್ತನೆದೆ ಇದ್ದಾಗ ಅವರಿಗೆ ಪರ್ಮಿಷ್ಟ್ ಕೊಟ್ಟಮ್ಮು ವಿಧಿಗನುಗುಣವಾಗಿ ಹೇಳುವುದಾದರೆ ಅದು ಸರಿಯಲ್ಲ.

ಶ್ರೀ ಟಿ. ಸಿ. ಬಸಪ್ಪ.—ಹಾಗೆ ವಿರುದ್ಧವಾಗಿ ವರ್ತಿಸಿದ ಇಲಾಖಾ ಅಧಿಕಾರಿಗಳ ಬಗ್ಗೆ ತಾವೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ?

ಶ್ರೀ ಎಚ್. ಎಂ ಚನ್ನಬಸಪ್ಪ.—ಆ ವಿಷಯ ಸರ್ಕಾರದವರ ಮುಂದೆ ಪರಿಶೀಲನೆಯಲ್ಲಿದೆ.

ಶ್ರೀ ಟಿ. ಸಿ. ಬಸಪ್ಪ.—ಈ ಬಾಕಿ ಕೊಡದೆ ಡಿಫಾಲ್ಟ್ ರಾಗಿರತಕ್ಕಂಥ ಜನರು ಎಷ್ಟಿದ್ದಾರೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—3-4 ಜನರಿದ್ದಾರೆ.

ಶ್ರೀ ಟಿ. ಸಿ. ಬಸಪ್ಪ.—ಪೊಬಲಗೆಷ್ಟು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನುಮಾರು 1 ಲಕ್ಷ 10 ಸಾವಿರ ರೂಪಾಯಿಗಳು.

ಶ್ರೀ ಟಿ. ಸಿ. ಬಸಪ್ಪ.—ಹೀಗೆ ಬಾಕಿದಾರರಾಗಿ ದ್ದರೂ, ಆ ಬಾಕಿ ಪೊಬಲಗನ್ನು ಅವರಿಂದ ವಸೂಲ್ಮಾಡದೆ ಇರುವಾಗ ಅವರಿಗೆ ಮಾಲನ್ನು ರಫ್ತು ಮಾಡುವುದಕ್ಕೆ ಏಕೆ ಅವಕಾಶಕೊಟ್ಟಿರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅವರ ನರಕಿಗೆ ತಕ್ಕ ಬೆಲೆ ದೊರೆಯುವುದಿಲ್ಲ ಎಂದು ಅವರ್ಯಾರೂ ತಮ್ಮ ಮಾಲನ್ನು ರಫ್ತು ಮಾಡಿಲ್ಲ. ಹಾಗೆಯೇ ಇಟ್ಟುಕೊಂಡಿದ್ದಾರೆ.

Industrial School Building at Chickmagalur.

(Progress of construction)

Q.—590. **Srimathi B. L. SUBBAMMA** (Chickmagalur—Mudigere).—

Will the Government be pleased to state:—

(*a*) the stage of work of the Industrial School building at Chikmagalur;

(*b*) the number of years since the work was commenced;

(*c*) since how many years the school is being run in rented building and the amount of rent paid per mensem;

(*d*) the department by which the work of the new building is being carried out?

A.—**Sri H. M. CHANNABASAPPA** (Minister for Industries).—

(*a*) The following items of work have been completed:—

1. Dismantling the existing tiled shed.
2. Earthwork.
3. Chunam concrete bed for foundation.
4. Size stone foundation.
5. Size stone basement.
6. Cement concrete slab work over the basement.
7. Superstructure, brick-wall 3″ high.
8. T.W. door frames and window frames.
9. Collection of granite baby metal, iron, etc., etc.

(*b*) In November 1954.

(*c*) For 23 years; Rs. 75 p.m.

(*d*) The work so far done was carried out by the Department of Industries and Commerce. The work has since been ordered to be entrusted to the Public Works Department.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ತಾವು ಇಲ್ಲಿ ತಿಳಿಸಿರುವ ಕೆಲಸಗಳನ್ನು ಒಂದು ವರ್ಷದಿಂದಲೂ ನಡೆಸುತ್ತಿದ್ದೀರಾ ?

*ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ಏನೇನು ಕೆಲಸ ಕೈಗೊಂಡಿದ್ದೀರಿ ಎಂದು ಕೇಳಿದ್ದಕ್ಕೆ ನಾವು ಇಂತಿಂಥ ಕೆಲಸಕಾರ್ಯಗಳನ್ನು ಕೈಗೊಂಡಿದ್ದೇವೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ಇದನ್ನೆಲ್ಲಾ ಹೇಳಲಾಗಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ತಾವು ಈ ಉತ್ತರವನ್ನು ಓದಗಿಸಲು ಎಲ್ಲಿಂದ ವರದಿಯನ್ನು ತರಿಸಿಕೊಂಡಿರಿ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಸೆಕ್ರೆಟೇರಿಯೆಟ್ ನಿಂದ.

ಶ್ರೀ ಬಿ. ಎಲ್. ಸುಬ್ಬಮ್ಮ.—ತಾವು ತರಿಸಿಕೊಂಡ ವರದಿ ನಿಜವಾದುದಲ್ಲ ಎಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವರದಿಯಲ್ಲಿ ತಿಳಿಸಿದ್ದ ಅಂಶಗಳನ್ನೇ ನಾವೀಗ ತಿಳಿಸಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಜಿಲ್ಲಾಧಿಕಾರಿಗಳೂ ಮತ್ತು ಜಿಲ್ಲಾಬೋರ್ಡ್ ಅಧ್ಯಕ್ಷರೂ ಅಲ್ಲಿ ಯಾವ ಕೆಲಸವೂ ನಡೆದಿಲ್ಲ ಎಂದು ಹೇಳಿರತಕ್ಕದ್ದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಹಾಗೆ ಅಲ್ಲಿ ಯಾವ ಕೆಲಸಕಾರ್ಯಗಳೂ ನಡೆಯದೆ ಇದ್ದಾಗ್ಲೂ ಹೀಗೆ ತಿಳಿಸಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹೋಗಲಿ, ಈಗಲಾದರೂ ತಾವು ಜಾಗ್ರತೆ ಈ ಕೆಲಸ ಮಾಡಿಸಿಕೊಡಲು ತೀವ್ರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಒಂದು ಭರವಸೆಯನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಗಾಗಲೆ ಕೆಲಸ ಪ್ರಾರಂಭವಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕಟ್ಟಡದ ಅಂದಾಜು ಎಷ್ಟು ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—17,700 ರೂಪಾಯಿಗಳು.

ಶ್ರೀ ಜಿ. ಪುಟ್ಟಸ್ವಾಮಿ.—ಈ ಕೆಲಸವನ್ನು ಕೈಗೊಳ್ಳಲು ಆ ಇಲಾಖೆಯವರಿಗೇ ಅವಕಾಶವಿದೆಯಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮೊದಲು ಈ ಕೆಲಸವನ್ನು ಆ ಇಂಡಸ್ಟ್ರಿಯಲ್ ಇಲಾಖೆಗೇ ವಹಿಸಲಾಗಿತ್ತು. ಆಗ ಈ ಕಟ್ಟಡದ ಅಂದಾಜು 10 ಸಾವಿರ ರೂಪಾಯಿಗಳಿತ್ತು. ಆದರೆ ಇತ್ತೀಚೆಗೆ ಈ ಅಂದಾಜು ಬದಲಾವಣೆ ಆಯಿತು. ಅಷ್ಟೇ ಅಲ್ಲದೆ ಅಕೌಂಟೆಂಟ್ ಜನರಲ್ಲೂ ಕೂಡ ಇದಕ್ಕೆ ವಿರೋಧಿಸಿದ್ದಾರೆ ಆ ಕಾರಣಗಳಿಂದ ಇತ್ತೀಚೆಗೆ ಈ ಕೆಲಸವನ್ನು ಅಲ್ಲಿ ಒಬ್ಬ ಎಗ್ಜಿಕ್ಯೂಟಿವ್ ಇಂಜಿನಿಯರ್ ಇರುವುದರಿಂದ ಆ ಇಲಾಖೆಗೆ ವರ್ಗಾಯಿಸಲು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಇಲಾಖೆಗೆ ಈ ಕೆಲಸವನ್ನು ಕೈಗೊಳ್ಳುವ ಅಧಿಕಾರ ಇರುವುದಿಲ್ಲ ಎಂದು ಮೊದಲು ಗೊತ್ತಾಗಲಿಲ್ಲವೇ ?